ಶ್ರೀ ಬಿ. ರಾಚಯ್ಯ.—ಈ ಕರಕೇರಿ ಟ್ರೇನಿಂಗ್ ಸೆಂಟರಿನಲ್ಲಿ ತರಪೇತಿ ಪಡೆದ ನಾಲ್ಕು ಜನ ಟ್ರೇನೀ ಏಗಳಿಗೆ ಒಂದೊಂದು ಬೋಟು ಕೊಡುವುದಕ್ಕೆ ಅವಕಾಶ ಇದೆ. ಇಂಥ ಸಂದರ್ಭದಲ್ಲಿ ಪರ್ಸನಲ್ ಸೆಕ್ಯೂರಿಟಿ ಕೋಲಾಟರಲ್ ಸೆಕ್ಯೂರಿಟಿ ತೆಗೆದುಕೊಳ್ಳುತ್ತಾರೆ. ಈಗ ಮಾನ್ಯ ಸದಸ್ಯರು ಹೇಳಿವ ವಿಚಾರವ ಬಗ್ಗೆ ತನಿಖೆ ನಡೆಸುತ್ತೇನೆ, ಹಾಗೂ ಹಣ ವಸೂಲ್ಮಾಡಲು ತಕ್ಕ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಎಲ್. ಗೌಡ.—ಹಿರಿಯೂರು ತಾಲ್ಲೂಕು ವಾಣಿವಿಲಾಸ ಸಾಗರಕ್ಕೆ ಮೆಷಿನರಿ ಕೊಡುವುದಕ್ಕೋಸ್ಕರ ಅರ್ಜಿ ಕೊಟ್ಟು ಒಂದು ವರ್ಷವಾಯಿತು. ಅದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕೋರ್ಡ್ ಸ್ಪೋರೇಜ್ ಒದಗಿಸುವುದು ಮಂಜೂರು ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೋರ್ಡ್ ಸ್ಪೋರೇಜ್ ಯಂತ್ರ ಒದಗಿಸಲು ಬಂದಿರತಕ್ಕ ಅರ್ಜಿಗಳು ಎಷ್ಟು ? ದೊಡ್ಡ ದೊಡ್ಡವರಿಗೆ ಮಾತ್ರ ಕೊಟ್ಟುಬಿಟ್ಟಿದ್ದೀರಿ. ಸಾಮಾನ್ಯರಿಗೆ ಕೊಟ್ಟಿಲ್ಲ. ಅದಕ್ಕೆ ಕಾರಣವೇನು ? ಸದಸ್ಯರಿಗೆ ಪ್ರಭಾವ ಬೀರುವಂಥವರಿಗೆ ಮಾತ್ರ ಕೊಟ್ಟಿದ್ದೀರಲ್ಲವೇ ?

Mr. SPEAKER.—The question is disallowed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದಿಂದ ದೊರೆಯುವ ಸಾಲ ಈ ಮನೆಯ ಸದಸ್ಯರಿಗೆ ಪ್ರಭಾವವಂತರಾದವರಿಗೆ ಅಷ್ಟೇ ಸಿಕ್ಕುತ್ತದೆ, ಇದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಸ್ಯಾಮಿ, ಸಾಲ ಪಡೆದವರ ಈ ಉದ್ದವಾದ ಪಟ್ಟಿ ನೋಡಿದರೆ ಅದರಲ್ಲಿ ಸಾಮಾನ್ಯ ಜನ ಎಷ್ಟು ಇದ್ದಾರೆ. ಈ ಸಭೆ ಸದಸ್ಯರು ಎಷ್ಟು ಇದ್ದಾರೆ ಎನ್ನುವುದು ತಾನೇ ಗೊತ್ತಾಗುತ್ತದೆ. ಪಟ್ಟಿ ನೋಡಬೇಕು. ವಿಷಯ ಸರಿಯಾಗಿ ತಿಳಿದುಕೊಳ್ಳದೆ ಮಾತನಾಡಬಾರದು.

ಶ್ರೀ ಬಿ. ಬಾಸ್ಕರಶೆಟ್ಟಿ.—ಹೋದ ವರ್ಷ ಐಸ್ ಪ್ಲಾಂಟಿಗೆ 40 ಸಾವಿರ ಲೋನ್ ಕೊಟ್ಟಿದ್ದೀರಿ. ಇದರಲ್ಲಿ ಬಿಲ್ಡಿಂಗ್ ಸಬ್‌ಸಿಡಿ ತೋರಿಸಿಲ್ಲ ; ಇದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಕಳೆದ ಮೂರು ವರ್ಷದ ವಿಚಾರ ಪ್ರಶ್ನೆಯಲ್ಲಿ ಕೇಳಿದ್ದರಿಂದ 1962 ರಿಂದ 1965 ನೇ ಇಸವಿ ವರೆಗೆ ವಿಷಯ ಬಂದಿದೆ. ಆದುದರಿಂದ ಅದನ್ನು ವಿಚಾರಿಸುತ್ತೇನೆ.

Mr. SPEAKER.—Since the Hon. Minister Sri D. Devaraj Urs is absent, Question No. 11 is held over.

Class 'A' Contractors Registered.

*Q.—18. Sri K. LAKKAPPA (Hebbur).—

Will the Government be pleased to state :—

the number of Class 'A' Contractors registered in the State ?

A.—Sri G. B. SHANKAR RAO (Parliamentary Secretary to the Minister for Public Works).

155 Contractors as on 31-3-1965.

ಶ್ರೀ ಕೆ. ಲಕ್ಕಪ್ಪ.—'ಎ' ಕ್ಲಾಸ್ ಕಂಟ್ರಾಕ್ಟರ್ ಆಗಬೇಕಾದರೆ ಅರ್ಹತೆ ಏನು ಇರಬೇಕು, ಸ್ವಾಮಿ ?

Sri G. B. SHANKAR RAO.—'A' Class contractor should have atleast..... .....

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ಉತ್ತರ ಇಂಗ್ಲೀಷಿನಲ್ಲಿ ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ? I do not know the reason.

ಶ್ರೀ ಜಿ. ಬಿ. ಶಂಕರರಾವ್.—'ಎ' ಕ್ಲಾಸ್ ಕಂಟ್ರಾಕ್ಟರ್ ಎಂದು ರಿಜಿಸ್ಟರ್ ಆಗಬೇಕಾದರೆ ಐದು ಲಕ್ಷ ರೂಪಾಯಿಗಿಂತ ಕಡಮೆಯಿಲ್ಲದಷ್ಟು ಅಂದಾಜಿನ ಕೆಲಸವನ್ನು ಹಿಂದಿನ ಎರಡು ವರ್ಷಗಳಲ್ಲಿ ಮಾಡಿರಬೇಕಾಗುತ್ತದೆ. ಇದಲ್ಲದೆ ಬೇಕಾದ ಸಾಲ್ವೆನ್ಸಿ ಕೂಡ ಇರಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—'ಎ' ಕ್ಲಾಸ್ ಕಂಟ್ರಾಕ್ಟರ್ಸ ಎಂಬುದನ್ನು ತೆಗೆದು ಹಾಕಿ ಬೇರೆ ಕಂಟ್ರಾಕ್ಟರ್ಸ್ ಲಿಸ್ಟ್ ತಯಾರು ಮಾಡಬೇಕಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri G. B. SHANKAR RAO.—We have got five classes of contractors 'ಎ' ಕ್ಲಾಸ್ ಕಂಟ್ರಾಕ್ಟರ್ಸ್ ಅಲ್ಲದೆ ಬೇರೆ ನಾಲ್ಕು ಕ್ಲಾಸುಗಳ ಕಂಟ್ರಾಕ್ಟರ್ಸ್ ಇದ್ದಾರೆ.

Fertiliser Factory.

*Q.—81. Sri B. BHASKAR SHETTY (Kaup).—

Will the Government be pleased to state :—

(*a*) whether there is any possibility of starting a Fertiliser Factory in the State ;

(*b*) the place where it is to be started and whether the site has been examined for this purpose ;

(*c*) whether it would be established in the Public Sector or in the Private Sector ;

(*d*) the estimated expenditure to be incurred in this factory and the estimated average production of the factory ?

A.—Sri K. MALLAPPA (Minister for Industries and Commerce).—

(*a*) Yes.

(*b*) Near Mangalore.

The technical experts of the Fertilisers and Chemicals, Travancore, Ltd., Alwaye, had visited the site.

(*c*) This is not yet finalised.

(*d*) The expenditure to be incurred in this factory cannot be estimated in the absence of the Project report which is not yet ready.

The capacity of the factory will be about 2,00,000 tons in terms of nitrogen per annum.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಗೊಬ್ಬರ ಕಾರ್ಖಾನೆ ಮಂಗಳೂರಿನಲ್ಲಿ ಆಗುತ್ತದೆ ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕಾಗಿ ಬಂದರ ಪ್ರದೇಶದಲ್ಲಿ ಸ್ಥಳ ನೋಡಿದ್ದೀರಾ ? ಇದು ವರೆಗೆ ಎಷ್ಟು ಪ್ರಗತಿಯಾಗಿದೆ ?

†ಶ್ರೀ ಕೆ. ಮಲ್ಲಪ್ಪ.—ಸ್ಥಳ ನೋಡಿದೆ. ಸ್ಥಳ ಅಕ್ವಿಜಿಷನ್ ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಗೊಬ್ಬರ ಕಾರಖಾನೆಗಾಗಿ ವೆಚ್ಚದ ಅಂದಾಜು ಎಷ್ಟು ಇದೆ ?

ಶ್ರೀ ಕೆ. ಮಲ್ಲಪ್ಪ.—28 ರಿಂದ 30 ಕೋಟಿ ಅಂದಾಜು ಇದೆ.